# ಅಂಚೆ ಮತ್ತು ತೆರಪಿನ ಶಿಕ್ಷಣ

# ಪ್ರಥಮ ಬಿ.ಎ./ಬಿ.ಕಾಂ./ಬಿ.ಎಸ್ಸಿ. ಪದವಿ ಪರೀಕ್ಷೆ,

# ಆಗಸ್ಟ್ / ಸೆಪ್ಟೆಂಬರ್ 2009

## ಕನ್ನಡ ಭಾಷಾ ಪತ್ರಿಕೆ - ೧

## (ಹೊಸಗನ್ನಡ ಕವಿತೆಗಳು, ಶೂದ್ರ ತಪಸ್ವಿ, ಬೆಟ್ಟದ ಜೀವ, ಆಡಳಿತ ಕನ್ನಡ)

## (ಹೊಸಬರಿಗೆ)

ಸಮಯ : 3 ಗಂಟೆಗಳು ಅಂಕಗಳು : 80 ಅಂಕಗಳು

1. ಅ) ಒಂದರ ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ. 07

೧) ವರುಷ ನೂರರ ಕರುಣೆ ಬಿಗಿವುದೆ
ಕುರುಬನಿರುಳೊಳು ಬಿಗಿದ ಕಟ್ಟ !
ಮರಿಯ ನಡತೆಗೆ ಕೋಪಗೊಳ್ವುದೆ?
ಕರುಣೆ ಒಲುಮೆಗೆ ಸಾಟಿಯೆ ?

೨) ಎಲೆ ಮರುಳೆ ಕೇಳ್
ಶಂಬೂಕ ಋಷಿಯ ಗೌರವಕಾಗಿ ಬಂದೆನಯ್
ಧರ್ಮ ದೇವತೆಯಾಜ್ಞೆಯಿಂ
ನೀನ್ ಆತನ ಮೆಯ್‌ಗಾವಲ್
ನಾನ್ ಉಸಿರ ಗೌರವಕೆ ಕಾವಲಯ್

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. 04

ತೆಂಕಣ, ಬಾಂದಳ, ಚವರಿ, ಗೇಹ, ಮೆಹರುಬಾನಿ, ನಳಿಗೆ, ವಟತರು, ಶೃಂಖಲೆ, ಕಳಿದ, ಅನೃತ, ಪೂಣ್ಕೆ, ಬಿಜ್ಜೆ

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. 04

ಕುರುಬಗೌಡ, ವೃಕ್ಷ ಭೈರವ, ಮದಲಿಂಗ

2. **ಐದಕ್ಕೆ ಸಂದರ್ಭ ಸೂಚಿಸಿ ಟಿಪ್ಪಣಿ ಬರೆಯಿರಿ.** **3 x 5 = 15**

೧. ಇದು ಬರೀ - ಬೆಳಗಲ್ಲೋ ಅಣ್ಣಾ.
೨. ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ.
೩. ಅವಸರದ ಹೆಜ್ಜೆಯ ಮೇಲೆ ಸರಿವ ಸಾವಿರ ಕೊರಳು.
೪. ಮಾತಿನ ಗೈರತ್ತಿನಲ್ಲಿ ಕರಾಮತ್ತು ನಡೆಸುವವರು.
೫. ತೋಳಗಳ್ ಕುರಿಯನ್ ಅರೆಯಟ್ಟುವೋಲ್.
೬. ಕಣ್ಗೆ ಬೆಳಕಾಗಿರ್ದೆ ನೀನ್.
೭. ಧನ್ಯಂ ನಿಮ್ಮನ್ನರಂ ಪಡೆದೆನ್ನ ರಾಜ್ಯಂ.
೮. ಕರು ಕಳಿದ ಹಸುವ ಹಾಲ್ ಕರೆವ ಗೌಳಿಗನಂತೆ.

3. 'ಬೆಳಗು' ಕವಿತೆಯ ಭಾವ ಸ್ವಾರಸ್ಯವನ್ನು ವಿವರಿಸಿ. 10 ಅಂಕಗಳು

ಅಥವಾ

ಯಾಂತ್ರಿಕವಾದ ಬದುಕಿನ ಬರಡುತನದ ಚಿತ್ರಣ 'ಮುಂಬೈ ಜಾತಕ' ಕವಿತೆಯಲ್ಲಿ ವ್ಯಕ್ತವಾಗಿರುವ ರೀತಿ. 10 ಅಂಕಗಳು

4. ವೃಕ್ಷ ಬೈರವ ಮತ್ತು ಮೃತ್ಯುವಿನ ಮಧ್ಯೆ ನಡೆಯುವ ಸಂಭಾಷಣೆಯನ್ನು ವಿವರಿಸಿ.

**ಅಥವಾ**

'ವರ್ಣಾಶ್ರಮ ಧರ್ಮಕ್ಕಿಂತ ಮಾನವ ಧರ್ಮ ಶ್ರೇಷ್ಠ' ವೆಂಬ ಕಾಳಜಿ ನಾಟಕದಲ್ಲಿ ಹೇಗೆ ವ್ಯಕ್ತವಾಗಿದೆ? 10 ಅಂಕಗಳು

5. ೧) ಗೋಪಾಲಯ್ಯನವರ ಮಾನವೀಯ ಅಂತಃಕರಣದ ವ್ಯಕ್ತಿತ್ವವನ್ನು ಪರಿಚಯಿಸಿ.

**ಅಥವಾ**

ಗೋಪಾಲಯ್ಯ ಮತ್ತು ಶಂಕರಮ್ಮನವರ ದಾಂಪತ್ಯದ ಸೊಗಸನ್ನು ವಿವರಿಸಿ. 10 ಅಂಕಗಳು

೨) ಅರಣ್ಯದ ಬದುಕಿನಲ್ಲಿ ಗೋಪಾಲಯ್ಯನವರು ಕೈಗೊಂಡ ಸಾಹಸದ ಪ್ರಯೋಗಗಳನ್ನು ಪರಿಚಯಿಸಿ.

**ಅಥವಾ**

ಶಂಕರಮ್ಮ, ನಾರಾಯಣ, ದೇರಣ್ಣ - ಇವರಲ್ಲಿ ಇಬ್ಬರನ್ನು ಪರಿಚಯಿಸಿ. 10 ಅಂಕಗಳು

6. ಅ) 'ಜ್ಞಾಪನ ಪತ್ರ' ಎಂದರೇನು? 2 ಅಂಕಗಳು

ಆ) ಸರ್ಕಾರಿ ಪತ್ರದ ವಿವಿಧ ಅಂಗಗಳನ್ನು ಸ್ಥೂಲವಾಗಿ ವಿವರಿಸಿ. 4 ಅಂಕಗಳು

ಇ) ಅರ್ಜಿ ಎಂದರೇನು ? ಸಾಂದರ್ಭಿಕ ರಜೆ ಕೋರಿ ಮೇಲಾಧಿಕಾರಿಗಳಿಗೆ ಅರ್ಜಿಯೊಂದನ್ನು ಬರೆಯಿರಿ.

4 ಅಂಕಗಳು

* * *